23ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಮತ್ತು
ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮ ವಿಶೇಷ ನ್ಯಾಯಾಧೀಶರು,
ಬೆಂಗಳೂರು ಸಿಟಿ. (ನ್ಯಾಯಾಂಗಣ-24)

ಸ್ಪೆಷಲ್ ಸಿ.ಸಿ. ಸಂಖ್ಯೆಃ 468/2016

ಪ್ರಾಸಾ.29 ಚಾಸಾ.19
ದಿಃ 09.01.2026

| | | |
|---|---|---|
| ಸಾಕ್ಷಿಯ ಹೆಸರು | ಃ | ಗೋಪಿನಾಥ್ |
| ತಂದೆಯ ಹೆಸರು | ಃ | ಎಸ್.ಕೆ. ರಾಮರತ್ನಂ |
| ವಯಸ್ಸು | ಃ | 67 ವರ್ಷ |
| ವೃತ್ತಿ | ಃ | ವ್ಯಾಪಾರ |
| ವಾಸ ಸ್ಥಳ | ಃ | ಹೊಸಪೇಟ್ |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಎಸ್.ಪಿ.ಪಿ.ಯವರಿಂದಃ-**

1. ಕಳೆದ 20 ವರ್ಷಗಳಿಂದ ಹೊಸಪೇಟೆಯಲ್ಲಿ Techno Waves ಹೆಸರಿನ ವ್ಯವಹಾರ ನಡೆಸುತ್ತಿದ್ದೇನೆ. ಈ ವ್ಯವಹಾರದಲ್ಲಿ ತೂಕದ ಮೆಷಿನ್ಸ್‌ಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೇನೆ. ಈ ತೂಕದ ಯಂತ್ರಗಳನ್ನು ಕಬ್ಬಿಣದ ಅದಿರಿನ ವ್ಯಾಪಾರಿಗಳಿಗೂ ಸಹ ಮಾರಾಟ ಮಾಡುತ್ತಿದ್ದೇನೆ. 2015ರಲ್ಲಿ ಎಸ್ಐ.ಟಿ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ 2007ರಿಂದ ಯಾರ್ಯಾರಿಗೆ ತೂಕದ ಯಂತ್ರಗಳನ್ನು ಮಾಡಿದ್ದೇನೆ, ಎಲೆಲ್ಲಿ ಇನ್ಸ್ಟಾಲ್ ಮಾಡಿಕೊಟ್ಟಿದ್ದೇನೆ ಎಂಬ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ನಾನು ಲಿಖಿತವಾಗಿ ದಾಖಲೆಯ ಸಮೇತ ತನಿಖಾಧಿಕಾರಿಗೆ ಮಾಹಿತಿ ನೀಡಿದ್ದೇನೆ. ಈಗ ತೋರಿಸಿದ ನಿ.ಪಿ.70ರಲ್ಲಿರುವ

ಬರವಣಿಗೆ ರೂಪದ ಕವಚ ಪತ್ರದೊಂದಿಗೆ ಅದಕ್ಕೆ ಲಗತ್ತಾಗಿರುವ ಎರಡು ಟ್ಯಾಕ್ಸ್ ಇನ್ವಾಯ್ಸಗಳ ಸ್ವಯಂ ದೃಢೀಕೃತ ನಕಲುಗಳನ್ನು ನಾನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದೇನೆ. 2007ರಲ್ಲಿ ಎರಡು ತೂಕದ ಮೆಷಿನ್‌ಗಳನ್ನು ಜೈಸಿಂಗ್ ಪುರದ ಎಸ್.ವಿ.ಕೆ. ಮಿನರಲ್ಸ್‌ರವರಿಗೆ ನಾನು ಮಾರಾಟ ಮಾಡಿರುವ ಬಗ್ಗೆ ಮೇಲೆ ಉಲ್ಲೇಖಿತ ಸ್ವಯಂ ದೃಢೀಕೃತ ಇನ್ವಾಯ್ಸಗಳಾಗಿರುತ್ತವೆ. ಅಲ್ಲದೆ ಈ ಎರಡೂ ಮೆಷಿನ್‌ಗಳನ್ನು ಜೈಸಿಂಗ್ ಪುರದ ಎಸ್.ವಿ.ಕೆ. ಮಿನರಲ್ಸ್‌ರವರ ಪ್ಲಾಟ್‌ನಲ್ಲಿ ನನ್ನ ಸಿಬ್ಬಂದಿ ಅಂದರೆ ಸರ್ವೀಸ್ ಇಂಜಿನಿಯರ್ ಮುಖೇನ ಇನ್ಸ್ಟಾಲ್ ಮಾಡಿಕೊಟ್ಟಿದ್ದೇವೆ. ಮಾರಾಟದ ಬಾಬ್ತು ಹಣ ನಾನು ಸ್ವೀಕರಿಸಿರುವ ಬಗ್ಗೆ ಸ್ವಯಂ ದೃಢೀಕೃತ ರಶೀದಿಯ ನಕಲನ್ನು ನಿ.ಪಿ.70ಕ್ಕೆ ಲಗತ್ತಿಸಲಾಗಿರುತ್ತದೆ. ಹಣವನ್ನು ಚೆಕ್ ಮುಖೇನ ಸ್ವೀಕರಿಸಲಾಗಿರುತ್ತದೆ. ಅಲ್ಲದೆ ತನಿಖಾಧಿಕಾರಿಯ ಮುಂದೆ ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ.

**ಪಾಟಿ ಸವಾಲುಃ ಶ್ರೀ.ಹೆಚ್.ಪಿ. ವಕೀಲರಿಂದ ಆರೋಪಿಯ ಪರಃ-**

2. ನಿ.ಪಿ.70ಕ್ಕೆ ಲಗತ್ತಾಗಿರುವ ಮೂರು ದಾಖಲೆಗಳು ಜೆರಾಕ್ಸ್ ನಕಲುಗಳು ಎಂದರೆ ನಿಜ. ಸಾಕ್ಷಿ ಮುಂದುವರೆದು ಮೂರು ಇನ್ವಾಯ್ಸಗಳಿದ್ದು ಆ ಪೈಕಿ ಎರಡನ್ನು ಕಸ್ಟಮರ್ಸ್‌ಗೆ ನೀಡಲಾಗುತ್ತದೆ, ಇನ್ನೊಂದನ್ನು ನಮ್ಮ ಬಳಿ ಇಟ್ಟುಕೊಂಡಿದ್ದು, ಅದರ ಜೆರಾಕ್ಸ್ ನಕಲನ್ನು ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಇನ್ವಾಯ್ಸಗಳಿಗೆ ನಾನುಸಹಿ ಮಾಡಿಲ್ಲ ಎಂದರೆ ಸುಳ್ಳು. ಮೆಷಿನ್ ಗಳನ್ನು ಇನ್ಸ್ಟಾ ಲ್‌ಮಾಡಲು ವೈಯಕ್ತಿಕವಾಗಿ ಸ್ಥಳಕ್ಕೆ ನಾನು ಹೋಗಿರಲಿಲ್ಲ, ಆದರೆ ನನ್ನ ಸಿಬ್ಬಂದಿಯನ್ನು ಕಳುಹಿಸಿದ್ದೆ. ಇನ್ಸ್ಟಾಲೇಷನ್ ಪೂರ್ಣಗೊಂಡ ಬಗ್ಗೆ ಡೆಲಿವರಿ ಚೆಲನ್ ಅನ್ನು ಕಸ್ಟಮರ್ ಗೆ ನೀಡಲಾಗುತ್ತದೆ.

ಅದರ ಒಂದು ಪ್ರತಿಯನ್ನು ನಾವು ಇಟ್ಟುಕೊಳ್ಳುತ್ತೇವೆ ಎಂದರೆ ಸರಿ. ಆ ಚೆಲನ್ ಪ್ರತಿಯನ್ನು ತನಿಖಾಧಿಕಾರಿಗೆ ನೀಡಿರುವುದಿಲ್ಲ. ವೈಯಕ್ತಿಕವಾಗಿ ಇನ್ಸ್ಟಾಲ್ ಮಾಡಿದ್ದ ಜಾಗವನ್ನು ನಾನು ನೋಡಿರುವುದಿಲ್ಲ. ಆದರೆ ಆ ಜಾಗ ಜೈಸಿಂಗ್ ಪುರದಲ್ಲಿ ಇರುವ ಬಗ್ಗೆ ಗೊತ್ತು. ಮೆಷಿನ್‌ಗಳನ್ನು ಯಾರಿಗೆ ಬೇಕಾದರೂ ಮಾರಿ ಇನ್ಸ್ಟಾಲ್ ಮಾಡಿ ಕೊಡುತ್ತೇವೆ. ಎರಡು ತೂಕದ ಮೆಷಿನ್‌ಗಳನ್ನು ಎಸ್‌ವಿಕೆ ರವರಿಗೆ ಮಾರಾಟ ಮಾಡಿಲ್ಲ ಎಂದರೆ ಸುಳ್ಳು.

**(3ನೇ ಆರೋಪಿ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುವರು.)**

**ಮರು ವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ

sd/-
(ಕೆ.ಎಂ.ರಾಧಾಕೃಷ್ಣ)
23ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು
ಬೆಂಗಳೂರು.